ಪಕ್ಷಿಲೋಕ

# ಬಾಳೆ ಗಿಳಿ

■ ಚಿತ್ರ ಬರಹ:
ಗಣೇಶ್ ಕಾಳೀಸರ

ಸಾಮಾನ್ಯವಾಗಿ ಮಳೆಗಾಲ ಬರುವುದರೊಳಗಾಗಿ ಪಕ್ಷಿಗಳು ಗೂಡು ಕಟ್ಟಿ ತಮ್ಮ ವಂಶಾಭಿವೃದ್ಧಿಯನ್ನು ಮುಗಿಸುತ್ತವೆ. ಮಳೆಗಾಲ ಶುರುವಾಗುವ ವೇಳೆಗೆ ಮರಿಗಳ ರೆಕ್ಕೆ ಬಲಿತು ಸ್ವತಂತ್ರವಾಗಿ ಬದುಕತೊಡಗುತ್ತವೆ.

ಈ ಅರ್ಧಕ್ಕೆ ಮುರಿದ ಅಡಿಕೆ ಮರದಲ್ಲಿ ಗೂಡು ಕಟ್ಟಿದ್ದ ಬಾಳೇಗಿಳಿಯ ಸಂಸಾರವೊಂದು ಇತ್ತೀಚೆಗೆ ಕಾಣ ಸಿಕ್ಕಿತು. ಮರದ ಪೊಟರೆಯೊಳಗೆ ಇವು ಗೂಡು ಕಟ್ಟುವುದರಿಂದ ಮರಿಗಳಿಗೆ ಇವು ಗುಟುಕು ಕೊಡುವದು ಕಾಣ ಸಿಗುವುದು ಅಪರೂಪ. ಆದರೆ ಮುರಿದ ಅಡಿಕೆ ಮರದಲ್ಲಿ ಗೂಡು ಕಟ್ಟಿದ್ದರಿಂದ ಒಂದೊಂದೇ ಹೆಜ್ಜೆ ಕೆಳಗಿಡುತ್ತಾ ಮರಿಗೆ ಗುಟುಕು ಕೊಟ್ಟ ಅದರ ಕೆಲ ಚಿತ್ರಗಳು ಸಿಕ್ಕವು.

ಗ್ರಾಮೀಣ ಭಾಷೆಯಲ್ಲಿ ಬಾಳೆ ಗಿಳಿ ಎಂದು ಕರೆಸಿ ಕೊಳ್ಳುವ ಇದರ ಹೆಸರು ನೇತಾಡುವ ಗಿಳಿ. ಬಾಳೇ ಕುಂಡಿಗೆಯ ಹೂವಿನ ಮಕರಂದವನ್ನು ಇವು ಸದಾ ಹೀರುವುದರಿಂದ ಇದಕ್ಕೆ ಬಾಳೆ ಗಿಳಿ ಎಂದು ಕರೆಯುತ್ತಾರೆ. ಪೇರಲೆ ಹಣ್ಣು, ಚಿಕ್ಕು ಹಣ್ಣು, ಪನ್ನೇರಳೆ ಹಣ್ಣುಗಳಾದ ಮರಗಳಿಗೆ ಇವು ತಪ್ಪದೆ ಹಾಜರ್.

ಹ್ಯಾಂಗಿಂಗ್ ಪ್ಯಾರೋಟ್‌ನ ವೈಜ್ಞಾನಿಕ ಹೆಸರು ಲೊರಿಕ್ಯುಲಸ್ ವರ್ನಾಲಿಸ್. ಇವು ಭಾರತವಲ್ಲದೆ ಶ್ರೀಲಂಕಾ, ನೇಪಾಳ, ಚೀನಾದಲ್ಲೂ ಕಾಣಸಿಗುತ್ತವೆ. ಗಾತ್ರದಲ್ಲಿ ಗುಬ್ಬಿಯಷ್ಟಿರುವ ಇವು ಗಾಢ ಹಸಿರು ಹಾಗೂ ತಿಳಿ ಹಸಿರು ಬಣ್ಣ ಹೊಂದಿವೆ. ಬಾಲದ ರೆಕ್ಕೆಯ ಮೇಲ್ಭಾಗದಲ್ಲಿ ಕೆಂಪು ಬಣ್ಣವಿರುತ್ತದೆ. ಗಂಡು ಗಿಳಿಗೆ ಕುತ್ತಿಗೆಯ ಅಡಿ ಭಾಗದಲ್ಲಿ ನೀಲಿ ಬಣ್ಣದ ಕಲೆಯಿರುತ್ತದೆ.

ಈ ಗಿಳಿಗಳು ಮರದ ಪೊಟರೆಯಲ್ಲಿ ಗೂಡು ಮಾಡುತ್ತವೆ. ಒಮ್ಮೆಗೆ ಸಾಮಾನ್ಯವಾಗಿ ಎರಡರಿಂದ ಮೂರು ಮೊಟ್ಟೆಯನ್ನಿಡುತ್ತವೆ. ಮೊಟ್ಟೆಗಳಿಗೆ ಹೆಣ್ಣು ಹಕ್ಕಿ ಸುಮಾರು 22 ದಿನ ಕಾವು ಕೊಡುತ್ತದೆ. ಮೊಟ್ಟೆಯೊಡೆದು ಹೊರ ಬಂದ ಮರಿ ಸುಮಾರು 30–35 ದಿನಗಳಲ್ಲಿ ಗೂಡಿನಿಂದ ಹೊರ ಹಾರುತ್ತವೆ. ಸಾಮಾನ್ಯವಾಗಿ ಫೆಬ್ರುವರಿಯಿಂದ ಮೇ ತಿಂಗಳೊಳಗೆ ಇವು ಮರಿ ಮಾಡುತ್ತವೆ. ನಮ್ಮ ತೋಟದಲ್ಲಿ ಸಂಸಾರ ಹೂಡಿದ್ದ ಈ ಅತಿಥಿಯೂ ಯಶಸ್ವಿಯಾಗಿ ತನ್ನ ಬಾಣಂತನ ಮುಗಿಸಿ ಮರಿಗಳೊಡನೆ ಹೊರ ಹಾರಿತು. ■



